## ಶಾಸಕರ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರ ಮೌಲ್ಯಮಾಪನ

# ನಗರ ಶಾಸಕರು ಸೆಕೆಂಡ್ ಕ್ಲಾಸ್

**ಬೆಂಗಳೂರು:** ನಗರದ ಶಾಸಕರು ಸಾರ್ವಜನಿಕರ ಪರೀಕ್ಷೆಯಲ್ಲಿ ಎರಡನೇ ದರ್ಜೆಯಲ್ಲಿ ಪಾಸಾಗಿದ್ದಾರೆ!

ಮೊದಲ ದರ್ಜೆಯಲ್ಲಿ ಪಾಸಾದವರು ಬೆರಳೆಣಿಕೆಯಷ್ಟು.

‘ನಮ್ಮ ಬೆಂಗಳೂರು ಪ್ರತಿಷ್ಠಾನ’ ಮತ್ತು ‘ದಕ್ಷ್’ ಸಂಸ್ಥೆ ಜಂಟಿಯಾಗಿ ನಗರದಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಶಾಸಕರ ಕಾರ್ಯವೈಖರಿ ಬಗ್ಗೆ ಸಾರ್ವಜನಿಕ ಮೌಲ್ಯಮಾಪನದಲ್ಲಿ ಅವರಿಗೆ ಸಿಕ್ಕ ಫಲಿತಾಂಶ ‘ಜಸ್ಟ್ ಸೆಕೆಂಡ್ ಕ್ಲಾಸ್’..!

ಸಮೀಕ್ಷೆ ಬೆಳಕು ಚೆಲ್ಲಿರುವ ಕುತೂಹಲಭರಿತ ವಿಷಯಗಳಲ್ಲಿ ಇದೂ ಒಂದು. ಈ ಸಮೀಕ್ಷೆಯಲ್ಲಿ ಶಾಸಕರ ಕಾರ್ಯವೈಖರಿ ಬಗ್ಗೆ ಲಭಿಸಿರುವ ಸರಾಸರಿ ಶ್ರೇಯಾಂಕ ಹತ್ತಕ್ಕೆ 5.4 ಮಾತ್ರ. ಅಷ್ಟೇ ಅಲ್ಲ.. ಪ್ರಸ್ತುತ ಅಧಿಕಾರದಲ್ಲಿರುವ ನಗರದ ಶಾಸಕರಲ್ಲಿ ಎಷ್ಟು ಜನ ಸಮಸ್ಯೆಗಳ ಪರಿಹಾರ ಹಾಗೂ ಪ್ರಗತಿ ದೃಷ್ಟಿಯಿಂದ ವಿಧಾನಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದ್ದಾರೆ?

ಶಾಸಕರ ಕಾರ್ಯನಿರ್ವಹಣೆಯ ಸರಾಸರಿ ಸೂಚ್ಯಂಕ ಎಷ್ಟು?

ನಗರದ ಶಾಸಕರ ಆಯ್ಕೆಯಲ್ಲಿ ಜಾತಿ, ಪಕ್ಷ ಮತ್ತು ಅಭ್ಯರ್ಥಿ ವರ್ಚಸ್ಸು ಈ ಮೂರರಲ್ಲಿ ಯಾವುದು ಪ್ರಮುಖ ಪಾತ್ರ ವಹಿಸುತ್ತವೆ?

ಎಂಬಿತ್ಯಾದಿ ಹಲವು ಆಸಕ್ತಿದಾಯಕ ವಿಷಯಗಳ ಮೇಲೂ ಸಮೀಕ್ಷೆ ಬೆಳಕು ಬೀರಿದೆ. ‘ನಮ್ಮ ಬೆಂಗಳೂರು ಪ್ರತಿಷ್ಠಾನ’ ಮತ್ತು ‘ದಕ್ಷ್’ನ ಜಂಟಿ ಸಮೀಕ್ಷೆಯ ವಿವರ ಚುನಾವಣೆ ಸಮೀಪಿಸುತ್ತಿರುವ ಸಮಯದಲ್ಲಿ ಸಾರ್ವಜನಿಕರಲ್ಲಿ ಸಹಜವಾಗಿಯೇ ಮೂಡಬಹುದಾದ ಇಂತಹ ಹಲವು ವಿಷಯಗಳ ಕುರಿತು ಮಾಹಿತಿ ಒಳಗೊಂಡಿದೆ.

### ಒಟ್ಟಾರೆ ಕಾರ್ಯನಿರ್ವಹಣೆ

ಕ್ಷೇತ್ರದ ಮತದಾರರ ನಿರೀಕ್ಷೆ ಹಾಗೂ ಅಲ್ಲಿನ ಜನಪ್ರತಿನಿಧಿಗಳ ಕಾರ್ಯನಿರ್ವಹಣೆ ನಡುವೆ ಹೆಚ್ಚು ಅಂತರ ಕಂಡುಬಂದಿದೆ. ನಗರದ ಎಲ್ಲ ಶಾಸಕರ ಕಾರ್ಯನಿರ್ವಹಣೆಯ ಒಟ್ಟಾರೆ ಸರಾಸರಿ 5.4(ಗರಿಷ್ಠ ಹತ್ತರಲ್ಲಿ). ಅದರಲ್ಲೂ ಗರಿಷ್ಠ ಸರಾಸರಿ 6.6 ಮತ್ತು ಕನಿಷ್ಠ ಸರಾಸರಿ 4.8.

### ಹೀಗಿತ್ತು ಸಮೀಕ್ಷೆ

ಆರೋಗ್ಯ ಸೌಲಭ್ಯ, ಶಿಕ್ಷಣ, ಮೂಲ ಸೌಕರ್ಯ, ಆಡಳಿತ, ಉದ್ಯೋಗಾವಕಾಶ ಮತ್ತಿತರ ವಿಷಯಗಳ ಕುರಿತ ಪ್ರಶ್ನೆಗಳನ್ನು ಇರಿಸಿಕೊಂಡು ನಗರದ 27 ವಿಧಾನ ಸಭಾ ಕ್ಷೇತ್ರಗಳಲ್ಲಿ ಕಳೆದ ಡಿಸೆಂಬರ್‌ನಲ್ಲಿ ‘ನಮ್ಮ ಬೆಂಗಳೂರು ಪ್ರತಿಷ್ಠಾನ’ ಮತ್ತು ‘ದಕ್ಷ್’ ಜಂಟಿಯಾಗಿ ಈ ಸಮೀಕ್ಷೆ ನಡೆಸಿದೆ. ಜನಪ್ರತಿನಿಧಿಗಳನ್ನು ಚುನಾಯಿಸುವ ಸಂದರ್ಭದಲ್ಲಿ ಸಾರ್ವಜನಿಕರು ಈ ಮೇಲಿನ ವಿಷಯಗಳಲ್ಲಿ ಯಾವುದನ್ನು ಗಮನದಲ್ಲಿರಿಸಿಕೊಂಡು ಮತ ಚಲಾಯಿಸಿದ್ದರು ಮತ್ತುಅಂತಹ ವಿಷಯಗಳಲ್ಲಿ ಶಾಸಕರ ಕಾರ್ಯನಿರ್ವಹಣೆ ಹೇಗಿತ್ತು ಎಂಬ ಎರಡು ಮೂಲ ಪ್ರಶ್ನೆಗಳನ್ನಿರಿಸಿಕೊಂಡು ಈ ಸಮೀಕ್ಷೆ ನಡೆಸಲಾಗಿತ್ತು. ಮೊದಲ ಪ್ರಶ್ನೆಗೆ ಸಂಬಂಧಿಸಿ ನಿಗದಿತ ವಿಷಯದ ಮುಂದೆ ಅಗತ್ಯ, ಅತ್ಯಗತ್ಯ ಮತ್ತು ಅಗತ್ಯವಿಲ್ಲ ಎಂಬುದರಲ್ಲಿ ಆಯ್ದ ಒಂದನ್ನು ನಮೂದಿಸಿ ತಮ್ಮ ಉತ್ತರ ತಿಳಿಸುವಂತೆ ಹಾಗೂ ಶಾಸಕರ ಕಾರ್ಯನಿರ್ವಹಣೆ ಸಂಬಂಧಿಸಿದಂತೆ ಉತ್ತಮ, ಅತ್ಯುತ್ತಮ ಮತ್ತು ಕೆಟ್ಟ ಎಂಬುದರಲ್ಲಿ ಆಯ್ದ ಒಂದನ್ನು ನಮೂದಿಸಿ ಉತ್ತರಿಸುವಂತೆ ಸೂಚಿಸಲಾಗಿತ್ತು. ಶಾಸಕರ ಕಾರ್ಯನಿರ್ವಹಣೆಗೆ ಸಂಬಂಧಿಸಿ ಗರಿಷ್ಠ ಹತ್ತರ ಆಧಾರದ ಮೇಲೆ ಅಂಕ ನಿಗದಿಪಡಿಸಲಾಗಿದೆ. ಹಾಗೆ ಸಮೀಕ್ಷೆಯಲ್ಲಿ ಕಂಡುಬಂದ ಆಸಕ್ತಿದಾಯಕ ಅಂಕಿ– ಅಂಶಗಳ ವಿವರ ಕೇವಲ ನಮ್ಮ ಓದುಗರಿಗಾಗಿ.

## ವಯೋಮಿತಿಗನುಗುಣವಾಗಿ ವಿಷಯವಾರು ಪ್ರಾಮುಖ್ಯತೆ

### 18 ರಿಂದ 30ರ ವಯಸ್ಸು

ಸಾರ್ವಜನಿಕ ಆಸ್ತಿ, ಕೆರೆ ಮತ್ತು ರಸ್ತೆ ಒತ್ತುವರಿ, ಹೆಚ್ಚು ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರ, ಉತ್ತಮ ಉದ್ಯೋಗಾವಕಾಶ, ಉತ್ತಮ ಸಾರ್ವಜನಿಕ ಸಾರಿಗೆ, ವಲಯ ನಿಯಂತ್ರಣ ನೀತಿಗಳು, ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ.

### 31 ರಿಂದ 45ರ ವಯಸ್ಸು

ಸಾರ್ವಜನಿಕ ಆಸ್ತಿ, ಕೆರೆ ಮತ್ತು ರಸ್ತೆ ಒತ್ತುವರಿ, ಉತ್ತಮ ಉದ್ಯೋಗಾವಕಾಶ, ವಲಯ ನಿಯಂತ್ರಣ ನೀತಿಗಳು, ಸಾರ್ವಜನಿಕ ಸೌಲಭ್ಯ ಮತ್ತು ಮೂಲಸೌಕರ್ಯ, ವಾಹನ ನಿಲುಗಡೆ ಸೌಲಭ್ಯ, ಕೆರೆಗಳ ಪುನರುಜ್ಜೀವನ.

### 46 ರಿಂದ 60ರ ವಯಸ್ಸು

ಸಮರ್ಪಕ ತ್ಯಾಜ್ಯ ನಿರ್ವಹಣೆ, ಸಾರ್ವಜನಿಕ ಸೌಲಭ್ಯ ಮತ್ತು ಮೂಲ ಸೌಕರ್ಯ, ಉದ್ಯೋಗ ಮತ್ತು ಶಿಕ್ಷಣ ಮೀಸಲು, ನೀರು ಸರಬರಾಜು ಮತ್ತು ಅದರ ಗುಣಮಟ್ಟ, ಕೆರೆಗಳ ಪುನರುಜ್ಜೀವನ, ಸಾರ್ವಜನಿಕ ಆಸ್ತಿ, ಕೆರೆ ಮತ್ತು ರಸ್ತೆ ಒತ್ತುವರಿ.

### 60 ವರ್ಷ ಮೇಲ್ಪಟ್ಟವರು

ವಲಯ ನಿಯಂತ್ರಣ ನೀತಿಗಳು, ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ, ಸಾರ್ವಜನಿಕ ಆಸ್ತಿ, ಕೆರೆ ಮತ್ತು ರಸ್ತೆ ಒತ್ತುವರಿ, ಸಾರ್ವಜನಿಕ ಸೌಲಭ್ಯ ಮತ್ತು ಮೂಲಸೌಕರ್ಯ, ಕೆರೆಗಳ ಪುನರುಜ್ಜೀವನ, ನೀರು ಸರಬರಾಜು ಮತ್ತು ಅದರ ಗುಣಮಟ್ಟ.

### ಅಭ್ಯರ್ಥಿಗಳ ಆಯ್ಕೆಯಲ್ಲಿ ಜಾತಿ, ಪಕ್ಷ ಪ್ರಭಾವ

ಅಭ್ಯರ್ಥಿಯ ವೈಯಕ್ತಿಕ ವರ್ಚಸ್ಸಿಗಿಂತ ಜಾತಿ ಹಾಗೂ ಪಕ್ಷವೇ ಪ್ರಮುಖ ಪಾತ್ರ ಬೀರುತ್ತದೆ ಎಂಬುದು ಸಮೀಕ್ಷೆಯಲ್ಲಿ ಪಾಲ್ಗೊಂಡ ನಾಗರಿಕರ ನಂಬಿಕೆ. ಅವರಲ್ಲಿ ಶೇ.41ರಷ್ಟು ಮಂದಿ ಜಾತಿ, ಶೇ.18.7ರಷ್ಟು ಮಂದಿ ಪಕ್ಷ ಹಾಗೂ ಶೇ.14.5ರಷ್ಟು ಮಂದಿ ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸು ನೋಡಿ ಮತ ಚಲಾಯಿಸುತ್ತಿರುವುದಾಗಿ ಹೇಳಿದ್ದಾರೆ.

### ಶಾಸನಸಭೆಯಲ್ಲಿ ಶಾಸಕರು ಕೇಳಿದ ಪ್ರಶ್ನೆಗಳೆಷ್ಟು?

ಸಮೀಕ್ಷೆಗೆ ಪರಿಗಣಿಸಿದ ನಗರದ 27 ಶಾಸಕರ ಪೈಕಿ ನಾಲ್ವರು ಶಾಸನಸಭೆಯಲ್ಲಿ ಒಂದೇ ಒಂದು ಪ್ರಶ್ನೆ ಕೇಳಿಲ್ಲ. 7 ಜನರು ಕೇಳಿದ ಪ್ರಶ್ನೆಗಳ ಸಂಖ್ಯೆ ಹತ್ತು ದಾಟಿಲ್ಲ. 8 ಜನರ ಕೇಳಿದ ಪ್ರಶ್ನೆಗಳ ಸಂಖ್ಯೆ ನೂರಕ್ಕಿಂತಲೂ ಕಡಿಮೆ. ನೂರಕ್ಕಿಂತ ಹೆಚ್ಚು ಪ್ರಶ್ನೆ ಕೇಳಿದವರು ಮೂವರು ಮಾತ್ರ. ಈ ಪಟ್ಟಿಯಲ್ಲಿ ಸಚಿವರಾಗಿರುವ ಶಾಸಕರು ಸೇರಿಲ್ಲ.

### ಶಾಸಕರ ಕಾರ್ಯನಿರ್ವಹಣೆ ಬಗ್ಗೆ ವಯೋವಾರು ಅಭಿಪ್ರಾಯ

ನಗರದ ಶಾಸಕರ ಕಾರ್ಯನಿರ್ವಹಣೆ ಹೇಗಿದೆ ಎಂಬ ಬಗ್ಗೆ ವಿವಿಧ ವಯೋಮಾನದವರ ಅಭಿಪ್ರಾಯಗಳ ಸರಾಸರಿ ಕ್ರಮಾಂಕ ಹೀಗಿದೆ. 18–30ರ ವಯೋಮಾನ– 5.35, 31–45ರ ವಯೋಮಾನ– 5.3, 46–60ರ ವಯೋಮಾನ– 5.55, 60ಕ್ಕೂ ಮೇಲ್ಪಟ್ಟ ವಯೋಮಾನ– 5.32.

### ಅತ್ಯಗತ್ಯ ವಿಷಯಗಳಲ್ಲಿ ಕಾರ್ಯನಿರ್ವಹಣೆ

**ಸಮೀಕ್ಷೆ ಪ್ರಕಾರ ಈ 6 ವಿಷಯಗಳು ಜನರ ದೃಷ್ಟಿಯಲ್ಲಿ ಅತ್ಯಗತ್ಯ ಎಂದು ಕಂಡುಬಂದಿವೆ.**

1. ಸಾರ್ವಜನಿಕ ಭೂಮಿ, ಕೆರೆ, ರಸ್ತೆಗಳ ಒತ್ತುವರಿ
2. ವಲಯ ನಿಯಂತ್ರಣ ನೀತಿಗಳು
3. ಉತ್ತಮ ಉದ್ಯೋಗಾವಕಾಶ
4. ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ
5. ಉದ್ಯಾನ, ಸಾರ್ವಜನಿಕ ಶೌಚಾಲಯ, ಉತ್ತಮ ಪಾದಚಾರಿ ಮಾರ್ಗ ಮುಂತಾದ ಮೂಲಸೌಕರ್ಯ
6. ಅಧಿಕ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳು

**ಈ ಮೇಲಿನ ವಿಷಯಗಳಲ್ಲಿ ಜನಪ್ರತಿನಿಧಿಗಳ ಸರಾಸರಿ ಕಾರ್ಯನಿರ್ವಹಣೆ 5.6**

### ನಗರದ ಜನತೆ ಹೆಚ್ಚಾಗಿ ತಲೆಕೆಡಿಸಿಕೊಳ್ಳದ ಅಂಶಗಳು

1. ಶಾಸಕರ ಸಂಪರ್ಕ ಲಭ್ಯತೆ (ಸರಾಸರಿ ಶ್ರೇಯಾಂಕ 6.3)
2. ಶಾಸಕರ ವಿಶ್ವಾಸಾರ್ಹತೆ (ಸರಾಸರಿ ಶ್ರೇಯಾಂಕ 6.7)
3. ವಾಹನ ನಿಲುಗಡೆ ಸೌಲಭ್ಯ
4. ಮಳೆ ನೀರು ಹರಿವು ಹಾಗೂ ಒಳಚರಂಡಿ ನಿರ್ವಹಣೆ

**(ಆದರೆ, ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಠ ಅಗತ್ಯದ ವಿಷಯಗಳು ಎಂದು ಪರಿಗಣಿಸಲ್ಪಟ್ಟ ಈ ಅಂಶಗಳು ಕೆಲವು ಕ್ಷೇತ್ರಗಳಲ್ಲಿ ಗರಿಷ್ಠ ಅಗತ್ಯದ್ದಾಗಿವೆ)**